

ಟೀಚರ್: ಯಾಕೋ, ಶಾಲೆಗೆ ಲೇಟಾಗಿ ಬರ್ತಾ ಇದೀಯ?
ರಂಗ: ಮನೇಲಿ ಪಾಪು ಹುಟ್ಟಿದೆ ಟೀಚರ್.
ಟೀಚರ್: ತಮ್ಮನೋ, ತಂಗಿನೋ?
ರಂಗ: ಗೊತ್ತಿಲ್ಲ ಟೀಚರ್, ಅದಕ್ಕಿನ್ನು ಬಟ್ಟೆ ಹೊಲಿಸಿಲ್ಲ.

ನ್ಯಾಯಾಧೀಶ: ಏನಯ್ಯಾ, ನಿನ್ನ ಪರ ವಾದಿಸಲು ನಿನಗೆ ಲಾಯರ್ ಬೇಡವೇ?
ಅಪಾದಿತ: ಇಲ್ಲ ಸಾರ್, ನಾನು ಸತ್ಯವನ್ನೇ ಹೇಳಬೇಕೆಂದಿದ್ದೇನೆ.

***

ಎಳೆಯ ಕೋಳಿಗೂ ಬೆಳೆದ ಕೋಳಿಗೂ ವ್ಯತ್ಯಾಸ ಹೇಗೆ ತಿಳಿಯುತ್ತಿ?
ಹಲ್ಲುಗಳಿಂದ!
ಕೋಳಿಗೆ ಹಲ್ಲುಗಳೆಲ್ಲಿ ಇದೆ?
ಅವುಗಳಿಗಿಲ್ಲ ನನಗಿದೆಯಲ್ಲ!

***

ಡಾಕ್ಟರ್: ಜ್ವರ ತುಂಬಾ ಇದೆ. ಬಹುಶಃ ರಾತ್ರಿ ಚಳಿ ಜ್ವರದಿಂದ ಹಲ್ಲು ಕಟಕಟ ಎಂದಿರಬೇಕಲ್ಲ?
ರೋಗಿ: ಗೊತ್ತಿಲ್ಲ, ಡಾಕ್ಟರರೇ ನನಗೆ ಕೇಳಿಸಲಿಲ್ಲ, ಅಲ್ಮಾರಾದಲ್ಲಿ ತೆಗೆದಿಟ್ಟಿದ್ದೆ.

***

ಕಾಣೆಯಾಗಿದ್ದ ಮಗ ಮಾರನೆಯ ದಿನ ಅಮ್ಮನಿಗೆ ಮೇಲ್ ಮಾಡಿದ ಅಮ್ಮ ನಾನು ಕ್ಷೇಮದಿಂದಿದ್ದೇನೆ. ಪಕ್ಕದ ಮನೆ ಪಾರಿಜಾತಳನ್ನು ಹುಡುಕಬೇಡಿ.

***

ಗಂಡ ರಾತ್ರಿ ಕನವರಿಸುತ್ತಿದ್ದ ಮಲ್ಲಿಕಾ, ರೋಜಾ, ಜಾಜಿ, ಚಂಪಕ, ಜಾಸ್ಮಿನ್...
ಬೆಳಿಗ್ಗೆ ಪತ್ನಿ ಕ್ಲಾಸ್ ತೆಗೆದುಕೊಂಡಳು
ನಾನು ತೋಟದಲ್ಲಿ ಮೆನೇಜರ್ ಅಲ್ವೇನೇ? ಅವೆಲ್ಲ ನಮ್ಮಲ್ಲಿನ ಹೂಗಳ ಹೆಸರು!

***

ಚಿನ್ನಾ ಊರು ತಲುಪಿದ ಕೂಡಲೇ ಮೆಸೇಜ್ ಕೊಡು
ಕೊಡಲೇಬೇಕಲ್ಲ ಪ್ರಿಯಾ, ನೀವು ಕೊಟ್ಟಿರೋ ಹಣ, ಅಷ್ಟರಲ್ಲಿ ಖಾಲಿಯಾಗಿರುತ್ತಲ್ಲ?

***

ಪತ್ನಿ: ಏನೂಂದ್ರೇ, ಕಳೆದ ವಾರ ದಾಂಡೇಲಿಗೆ ಹಂದಿಬೇಟೆಗೆ ಅಂತ ಹೇಳಿ ಹೋಗಿದ್ರಲ್ಲ...?
ಪತಿ: ಹೌದು! ಏನಾಯ್ತೇ ಈಗ?
ಪತ್ನಿ: ಏನೂ ಆಗಿಲ್ಲ, ಆ ಹಂದಿ ಹಾಲ್‌ನಲ್ಲಿ ಸೋಫಾ ಮೇಲೆ ಕುಳಿತು ಟಿ.ವಿ. ನೋಡ್ತಾ ಇದೆ.

***

ಟಿ.ವಿ. ರಿಮೋಟ್ ಸರಿ ಆಯ್ತೇನೇ?
ತುಂಬಾ ತಲೆ ತಿನ್ತು ಕಣ್ರೀ ಶೆಲ್ ಬದಲಾಯಿಸಿದರೂ ಸರಿಯಾಗಲಿಲ್ಲ, ಕೊನೆಗೆ ನೀವು ಅಂತ ಅಂದ್ಕೊಂಡು ತಲೆ ಮೇಲೆ ಒಂದು ಕೊಟ್ಟೆ ನೋಡಿ. ಸರಿ ಹೋಗಿಬಿಡ್ತು.

***

ಜೈಲರ್: ಏಯ್ ಬೇಕೂಫ್, ಗಿಡಕ್ಕೆ ನೀರು ಹಾಕುವುದಕ್ಕೂ ಬರಲ್ವಲ್ಲೋ? ಕತ್ತೆ ಮೇಯಿಸೋಕೆ ಹೋಗು
ಕೈದಿ: ಹಾಗೆಲ್ಲ ಬಯ್ಯಬೇಡಿ ಸಾರ್. ನಿಮಗೆ ಸರಿ ಹೋಗದಿದ್ರೆ ಮನೆಗೆ ಕಳಿಸಿಬಿಡಿ.

***

ಏನಯ್ಯಾ ನಿನ್ನ ಹೆಂಡ್ತಿ ಕ್ಷೇಮ ತಾನೇ?
ಎಲ್ಲಿಯ ಹೆಂಡ್ತಿ ಕಣಯ್ಯ? ಬಾಯಿ ತಪ್ಪಿ ಏನೋ ಅಂದದಕ್ಕೆ ಡೈವೋರ್ಸ್ ಕೊಟ್ಟುಬಿಟ್ಟಳು.
ತಕ್ಷಣ ಸುತ್ತಲೂ ಖುಷಿಯಿಂದ ಹತ್ತಾರು ಮಂದಿ ಸೇರಿ ಕೇಳಿದರು ಬಾಯಿತಪ್ಪಿ ಅಂಥದ್ದೇನು ಹೇಳಿದಿರಿ ಸಾರ್?

(ಸಂಗ್ರಹ) ಕೆ.ಆದಿತ್ಯ ಹೆಬ್ಬಾರ್, ಹರಪನಹಳ್ಳಿ

ಜಲ್ಲಿಕಟ್ಟುನೇ ಭಯಂಕರ ಆಟ ಎಂದು ಹೆದರಬೇಡಿ.'ತಾಳಿಕಟ್ಟು'ಎಂಬ ಸಾಂಪ್ರದಾಯಿಕ ಆಟ ಅದಕ್ಕಿಂತಲೂ ಭಯಂಕರ! ಜಲ್ಲಿಕಟ್ಟುವಿನಲ್ಲಿ ಮಾತುಬಾರದ ಗೂಳಿಯೊಡನೆ ಕೆಲಗಂಟೆ ಹೋರಾಟ. ತಾಳಿಕಟ್ಟುವಿನಲ್ಲಿ ಮಾತನಾಡುವ ಕಾಳಿಯೊಡನೆ ಜನ್ಮ ಪೂರ್ತಿ ಪರದಾಟ ಎಂದು ಹರಟೆಕಟ್ಟೆಯಲ್ಲಿ ತಿಪ್ಪೇಶಿ ಹೇಳುತ್ತಿದ್ದ.

***

ತಿಪ್ಪ: ಯಾಕ್ಲಾ ಮಲ್ಲೇಶಿ, ಬೆಳಿಗ್ಗೆ ಬಲಕ್ಕೆ ಎದ್ನ ಎಡಕ್ಕೆ ಎದ್ನ ಎಂದು ಯೋಚನೆ ಮಾಡ್ತಿದ್ದೀಯ ಎಂದು ಕಟುಕಿದ.
ಮಲ್ಲೇಶಿ: ಬಲಕ್ಕೆ, ಎಡಕ್ಕೆ ಎದ್ದು ಅನ್ನೋದಕ್ಕಿಂತ, ಮೇಲಕ್ಕೆ ಎದ್ವಿ ಅನ್ನೋದೇ ಮುಖ್ಯ ಕಣ್ಲಾ ಎಂದ.

***

ಮದುವೆ ಮನೆಯಲ್ಲಿ ಊಟಕ್ಕಾಗಿ ಕಾದೂ ಕಾದೂ ಬೇಸತ್ತು ವ್ಯಕ್ತಿ, ವ್ಯವಸ್ಥಾಪಕರೊಂದಿಗೆ ಕೂಗಾಟಕ್ಕಿಳಿದ. 'ಏನ್ರೀ ಇದು, ನಾನು ಅಷ್ಟು ಹೊತ್ತಿನಿಂದ ಕಾಯುತ್ತಲೇ ಇದ್ದೀನಿ. ಈಗ ಬಂದವರಿಗೆಲ್ಲ ಎಲೆ ಹಾಕ್ತಿದ್ದೀರಿ. ನಾನು ಮಾತ್ರ ಮೂರ್ಖನ ಹಾಗೆ ನಿಂತೇ ಇದ್ದೇನೆ'.
ವ್ಯವಸ್ಥಾಪಕ: ಸಾರ್ ಸಮಾಧಾನ ಮಾಡ್ಕೊಳ್ಳಿ. ವಧು ಅಥವಾ ವರನಿಗೆ ಉಡುಗೊರೆ ಕೊಟ್ಟ ತಕ್ಷಣ ನಿಮ್ಮ ಮೊಬೈಲ್‌ಗೆ OTP ಬರುತ್ತೆ. ಅದನ್ನು ನಮ್ಮೊಂದಿಗೆ ಹಂಚಿಕೊಂಡರೆ, ನಿಮ್ಮ ಊಟ ಸಿದ್ಧವಾಗಿರುತ್ತದೆ.

(ಸಂಗ್ರಹ) ಸಿಹಿ ಮೊಗೆ ರಮೇಶ್ ಮೈಸೂರು

ಕೈದಿ ಇನ್ನೊಬ್ಬ ಕೈದಿಗೆ ನಿನ್ನನ್ನು ಜೈಲಿಗೆ ಯಾಕೆ ಹಾಕಿದ್ರು ಅಂತ ಕೇಳಿದ.
ಇನ್ನೊಬ್ಬ ಕೈದಿ: ಬ್ಯಾಂಕಿನಲ್ಲಿ ಕಳ್ಳತನ ಮಾಡಿ ಅಲ್ಲೆ ಹಣ ಎಣಿಸುತ್ತಾ ಕುಳಿತ್ತಿದ್ದೆ, ಪೊಲೀಸಿನವರು ಬಂದು ಹಿಡಿದುಕೊಂಡರು ಎಂದ.
ಕೈದಿ: ಎಂತಹ ದಡ್ಡ ಅಲ್ಲೇ ಯಾಕೆ ಹಣ ಎಣಿಸುತ್ತ ಕುಳಿತೆ? ಎಂದು ಕೇಳಿದ ಅದಕ್ಕೆ ಆತ 'ಮತ್ತೆ ಬ್ಯಾಂಕಿನಲ್ಲಿ ನಗದು ಹಣ ಇಲ್ಲೆ ಸರಿಯಾಗಿ ಎಣಿಸಿಕೊಳ್ಳಿ ನಂತರ ನಾವು ಜವಾಬ್ದಾರರಲ್ಲ' ಅಂತ ಬೋರ್ಡ್ ಬರೆದಿತ್ತಲ್ಲ ಅದಕ್ಕೆ ಎಂದ.

***

ಕೃಷ್ಣದೇವರಾಯ ತೆನಾಲಿ ರಾಮಕೃಷ್ಣರೇ ನಮ್ಮ ಸ್ಟಾಫ್‌ನಲ್ಲಿ ತುಂಬ ಶ್ರಮಪಟ್ಟು ಕೆಲಸ ಮಾಡುವವರನ್ನು ಪತ್ತೆ ಹಚ್ಚುವುದು ಹೇಗೆ? ಎಂದು ಕೇಳಿದರು.
ತೆನಾಲಿ ರಾಮಕೃಷ್ಣ ಬಹಳ ಸುಲಭ ಮಹಾರಾಜರೇ, ಈಗಲೇ ತೋರಿಸುತ್ತೆನೆ ನೋಡಿ ಎಂದು ಹೋಗಿ ಎಲ್ಲ ಸ್ಟಾಫ್‌ನ ಕರೆದುಕೊಂಡು ಬಂದು ಚೆಕ್ ಮಾಡಿದರು. ನಂತರ ಇವನೇ ನೋಡಿ ಮಹಾರಾಜ ತುಂಬ ಶ್ರಮಪಟ್ಟು ಕೆಲಸ ಮಾಡುವುದು. ಅಂತ ಒಬ್ಬ ವ್ಯಕ್ತಿಯನ್ನು ತೋರಿಸಿದ.
ಅದಕ್ಕೆ ಕೃಷ್ಣದೇವರಾಯರು ಅವನೇ ಅಂತ ನಿನಗೆ ಹೇಗೆ ಗೊತ್ತಾಯಿತು ಎಂದು ಕೇಳಿದರು.
ಆಗ ತೆನಾಲಿ ರಾಮಕೃಷ್ಣ ಅವನ ಮೊಬೈಲ್ ತೋರಿಸುತ್ತ ನೋಡಿ ಮಹಾರಾಜರೆ ಇವನ ಮೊಬೈಲ್‌ನಲ್ಲಿ 98% ಬ್ಯಾಟರಿ ಇದೆ. ಉಳಿದವರದ್ದೆಲ್ಲಾ ಕಡಿಮೆ ಆಗಿದೆ ಎಂದ.

ಸಂಗ್ರಹ: ಶರದ ಕುಲಕರ್ಣಿ